## ಸುಳ್ಳುಗಾತಿ

ತಿಮ್ಮ ಬಹಳ ಬೇಸರದಲ್ಲಿರುವುದನ್ನು ಕಂಡ ಗುಂಡ, 'ಯಾಕೊ? ಏನಾಯ್ತು?' ಎಂದು ಕೇಳಿದ. ತಿಮ್ಮ ಅದೇ ಬೇಸರದಿಂದ, 'ನನ್ನ ಹೆಂಡತಿ ತುಂಬಾ ಸುಳ್ಳುಗಾತಿ ಕಣೋ' ಎಂದ. 'ಯಾಕೆ? ಏನು ಸುಳ್ಳು ಹೇಳಿದಳು?' ಕೇಳಿದ ಗುಂಡ. 'ನಿನ್ನೆ ಮಧ್ಯಾಹ್ನ ಅವಳು ನನಗೆ ಹೇಳದೇ ಎಲ್ಲೋ ಹೋಗಿದ್ದಳು. ಕೇಳಿದರೆ ತನ್ನ ಗೆಳತಿ ಮಾಲಾ ಜೊತೆ ಸಿನಿಮಾಗೆ ಹೋಗಿದ್ದೆ ಅಂದಳು.' 'ಅದರಲ್ಲೇನಿದೆ ಸುಳ್ಳು? ಅವಳು ತನ್ನ ಗೆಳತಿ ಮಾಲಾ ಜೊತೆಗೆ ಸಿನಿಮಾಕ್ಕೆ ಹೋಗಿರಬಹುದು' ಗೆಳೆಯನ ಉವಾಚ. 'ಮೂರ್ಖ, ಅವಳ ಗೆಳತಿ ಮಾಲಾ ಜೊತೆ ನಾನು ಸಿನಿಮಾಗೆ ಹೋಗಿದ್ದೆ' ಎಂದ ತಿಮ್ಮ!

**ಪ್ರಕಾಶ ಎಸ್. ಮನ್ನಂಗಿ**



## ಹನುಮಂತನನ್ನು ಕೇಳು



ಕಲೆ: ಗಣೇಶ ಆಚಾರ್ಯ

ಒಮ್ಮೆ ಪತಿ ಪತ್ನಿ ಇಬ್ಬರೂ ಜಾತ್ರೆಗೆ ಹೋದರು. ಆ ಗುಂಪಿನಲ್ಲಿ ಪತ್ನಿ ಎಲ್ಲೋ ತಪ್ಪಿಸಿಕೊಂಡಳು. ಅವನಿಗೆ ಬಹಳ ದುಃಖವಾಯಿತು. ಹತ್ತಿರವೇ ಇದ್ದ ಶ್ರೀರಾಮದೇವರ ಗುಡಿಗೆ ಹೋಗಿ. 'ಹೇ ಪ್ರಭು! ನನ್ನ ಪತ್ನಿ ಎಲ್ಲೋ ತಪ್ಪಿಸಿಕೊಂಡಿದ್ದಾಳೆ. ದಯವಿಟ್ಟು ಅವಳನ್ನು ಹುಡುಕಿಕೊಡು. ಅವಳಿಲ್ಲದೆ ನಾನು ಒಂದು ನಿಮಿಷವೂ ಇರಲಾರೆ...' ಎಂದು ಬೇಡಿಕೊಂಡ. ಆಗ ಶ್ರೀರಾಮಚಂದ್ರ, 'ಭಕ್ತಾ, ಕಣ್ಣು ಬಿಡು. ಇದೇ ರಸ್ತೆಯಲ್ಲಿ ನೇರವಾಗಿ ಹೋಗಿ ಬಲಕ್ಕೆ ತಿರುಗಿಕೊ. ಅಲ್ಲಿ ಹನುಮಂತನ ಗುಡಿ ಇದೆ. ನಿನ್ನ ಪತ್ನಿಯನ್ನು ಹುಡುಕಿಕೊಡಲು ಅವನನ್ನು ಕೇಳಿಕೋ. ನನ್ನ ಪತ್ನಿಯನ್ನು ಅವನೇ ಹುಡುಕಿಕೊಟ್ಟದ್ದು!' ಎಂದ.

**ಎ.ಕೆ. ಬದರಿನಾಥ್**